**ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ**

**ಸ್ಪೇಷಲ್.ಸಿ ಸಂಃ 67/2018**

ಲೋಕಾಯುಕ್ತ ಪೋಲೀಸ್ ಠಾಣೆ ಯಾದಗಿರಿ . .....ಫಿರ್ಯಾದಿ

ವಿರುದ್ಧ

ಮೊಹನ .....ಆರೋಪಿ

**<u>ದೋಷಾರೋಪಣೆ</u>**

ನಾನು **ಬಿ.ಜಯಂತ ಕುಮಾರ್, ಬಿ.ಎ.ಲಾ., ಎಲ್.ಎಲ್.ಎಮ್**, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ, ಆರೋಪಿತರಾದಃ

1. ಮೋಹನ ತಂದೆ ಬಾಬುರಾವ್ ದೇಶಮುಖ, ವಯಸ್ಸು 58 ವರ್ಷ, ಉದ್ಯೋಗಃ ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ-ವಿಭಾಗ, ಸುರಪುರ ವಾಸಃ ಚಂದ್ರಲಾ ಅನುಗ್ರಹ, ಮನೆ ಸಂಃ 1-891/24/1/24/2/11, ನವಜೀವನ ಲೇಔಟ್, ಹಳೇ ಜೇವರ್ಗಿ ರೋಡ್, ಕಲಬುರಗಿ.

**ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.**

ಮೇಲೆ ಹೆಸರಿಸಿದ ಆರೋಪಿಯಾದ ನೀವು ಸರ್ಕಾರಿ ನೌಕರನಾಗಿ ಲೋಕೋಪಯೋಗಿ ಇಲಾಖೆ ಸುರಪುರದಲ್ಲಿ ಎ.ಇ.ಇ ಅಂತಾ ಕಾರ್ಯ ನಿರ್ವಹಿಸುತ್ತಿದ್ದು, ದಿನಾಂಕಃ 12.01.1999 ರಿಂದ 06.02.2016 ರ ವರೆಗೆ ನೀವು ಒಟ್ಟು ರೂ.1,26,32,468.44 ರಷ್ಟು ಆಸ್ತಿ ಸಂಪಾದನೆ ಮಾಡಿದ್ದು ಅದನ್ನು ಬಿ-ಎಂದು ಪರಿಗಣಿಸಿ, ಪರಿಶೀಲನಾ ಅವಧಿಯಲ್ಲಿ ನೀವು ಒಟ್ಟು ರೂ.47,83,461.25 ರಷ್ಟು ಖರ್ಚು ಮಾಡಿದ್ದು ಅದನ್ನು ಡಿ-ಎಂದು ಪರಿಗಣಿಸಿ ನಿಮ್ಮ ನ್ಯಾಯಯುತ ಆದಾಯ ಮೌಲ್ಯ ರೂ. 1,12,69,798.00 ರಷ್ಟು ಆಗಿರುತ್ತದೆ ಅದನ್ನು ಸಿ-ಎಂದು ಪರಿಗಣಿಸಿ, ಬಿ ಮತ್ತು ಡಿ ಯನ್ನು ಒಟ್ಟುಗೂಡಿಸಿ ಸಿ ನಲ್ಲಿ ಕಳೆಯಲಾಗಿ ಉಳಿದಿರುವ ರೂ. 61,46,131.69 ಮೊತ್ತವನ್ನು ನಿವು ಪಡೆದಿರುವ ನ್ಯಾಯಯುತ ಆದಾಯಕ್ಕಿಂತಲೂ ಅಂದರೆ ಒಟ್ಟು ಶೇ 54.53 ರಷ್ಟು ಅಸಮತೋಲಿತ ಆದಾಯ ಭ್ರಷ್ಟ ಮಾರ್ಗದ ಮೂಲಕ ಸಂಪಾದಿಸಿ ಅಪರಾಧಿಕ ಬ್ರಷ್ಟಾಚಾರವೆಸಗಿ ತನ್ಮೂಲಕ ಭ್ರಷ್ಟಾಚಾರ ಪ್ರತಿಬಂಧ ಕಾಯ್ದೆ 1988 ರ ಕಲಂ.13(1)(ಇ) ಸಂಗಡ 13(2) ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೇಯತೆಯ ಪರಿಧಿಯಲ್ಲಿ ಎಸಗಿರುವಿರಿ.

ಈ ಮೇಲೆ ಹೇಳಿರುವ ಆಪಾದನೆಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಇಂದು ದಿನಾಂಕ **18.08.2023** ರಂದು ಆದೇಶಿಸಿದ್ದೇನೆ.

**ಸ್ಥಳಃ ಯಾದಗಿರಿ**

**ವಿಶೇಷ ಮತ್ತು ಸತ್ರ ನ್ಯಾಯಾಧೀಶರು**
**ಯಾದಗಿರಿ**